ರಕ್ಷಣೇನೂ ಇರುತ್ತೆ. ಆಮೇಲೆ ನಡುರಾತ್ರೀಲಿ ಯಾರಿಗೂ ಕಾಣದಂಗೆ, ಯಾರಿಗೂ ಕೇಳದಂಗೆ, ಅದನ್ನ ಎತ್ಕೊಂಬಾ.'

ಝೀನತ್ ಲಂಗದ ಅಂಚು ಮೇಲೆತ್ತಿ ಅದರ ಅಂಚನ್ನು ಹಲ್ಲಿನ ನಡುವೆ ಕಚ್ಚಿಕೊಂಡಳು. ಹಳೆಯ ಬಟ್ಟೆಗಳನ್ನು ತೆಗೆದುಕೊಂಡು ಸೊಂಟದ ಸುತ್ತ ಸುತ್ತಿಕೊಳ್ಳಲು ಶುರು ಮಾಡಿದಳು. ಸೊಂಟದಿಂದ ಮೇಲಕ್ಕೆ ಹಳೆಬಟ್ಟೆ ಸುತ್ತಿಕೊಂಡ ಮೇಲೆ ಲಂಗ ಕೆಳಗೆ ಬಿಟ್ಟಳು. ನೈಮಾ ಕಣ್ಣಗಲಿಸಿಕೊಂಡು ಅವ್ವನ್ನ ನೋಡುತ್ತಿದ್ದಳು:

'ಹಂಗಾರೆ ಅಪ್ಪನಿಗೆ ಏನು ಹೇಳೋದು?'

'ಅವೆಲ್ಲ ಈಗ್ಯಾಕೆ ಮಾತಾಡೋದು? ಸ್ಟೇಷನ್ನಿಗೆ ಹೋಗುವಾಗ ಈ ಜೋಳದ ಬುಟ್ಟಿ ಎತ್ತಿ ನನ್ನ ತಲೆ ಮೇಲಿಡು. ಸಂತೇಲಿ ಜನ ನನ್ನನ್ನ ಈ ಅವತಾರದಲ್ಲೇ ನೋಡಲಿ. ನಿಮ್ಮಪ್ಪ ವಾಪಸು ಬಂದಾಗ, ಹಾದರಕ್ಕೆ ಹುಟ್ಟಿದ ಮೊಮ್ಮಗನ್ನ ನೋಡೋಕಿಂತ ಅವನ ಸ್ವಂತ ಮಗನ್ನ ನೋಡೋದು ಒಳ್ಳೇದಲ್ಲವ?'

---

## ಅಲೀಫಾ ರಿಫಾತ್ (1930–1996)

ಈಜಿಪ್ಟ್‌ನ ವಿವಾದಾತ್ಮಕ ಲೇಖಕಿ. ಧರ್ಮ, ಸ್ವಾತಂತ್ರ್ಯ, ಸ್ತ್ರೀವಿಮೋಚನೆಗಳಂಥ ವಿಷಯಗಳನ್ನು ಕುರಿತು ನಿರ್ಭೀತವಾಗಿ ಬರೆದುದರಿಂದ ಇವರು ಮತಾಂಧರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. 'ಈವ್ ರಿಟರ್ನ್ಸ್ ಟು ಆಡಂ', 'ಹೂ ಕ್ಯಾನ್ ಮ್ಯಾನ್ ಬಿ?' 'ಆನ್ ಲಾಂಗ್ ವಿಂಟರ್‌ನೈಟ್' ಇವರ ಪ್ರಕಟಿತ ಕೃತಿಗಳಲ್ಲಿ ಕೆಲವು.

ಅಲೀಫಾ ಅವರ 'ಆ್ಯನ್ ಇನ್ಸಿಡೆಂಟ್ ಇನ್ ದಿ ಘೋಬಾಷಿ ಹೌಸ್ಹೋಲ್ಡ್' ಕತೆಯನ್ನು ಆಫ್ರಿಕಾದ ಪ್ರಾತಿನಿಧಿಕ ಕತೆಗಳ ಸಂಕಲನಕ್ಕೆಂದು ಆಫ್ರಿಕಾದ ಪ್ರಖ್ಯಾತ ಲೇಖಕ ಚಿನುವ ಅಚೇಬೆ ಆಯ್ಕೆ ಮಾಡಿಕೊಂಡಿದ್ದಾರೆ. ನೈತಿಕತೆ, ಅನೈತಿಕತೆಗಳ ಸರಳ ಗಡಿಗೆರೆಗಳ ಆಚೆಗೆ ಕುಟುಂಬಗಳ ಒಳಕುದಿಯನ್ನು ಬಹು ಸೂಕ್ಷ್ಮವಾಗಿ ಹೇಳುವ ಕತೆ ಇದು. ಸಾವು, ಬದುಕಿನ ಪ್ರಶ್ನೆಯಾಗಿರುವ –ಬಿಕ್ಕಟ್ಟೊಂದನ್ನು ಹೇಳಿಯೂ ಹೇಳದಂತೆ ಈ ಕತೆ ನಿಭಾಯಿಸಿರುವ ರೀತಿ ವಿಶಿಷ್ಟವಾಗಿದೆ. ಆಫ್ರಿಕಾದ ತಾಯ್ತನದ ಅನನ್ಯ ಗುಣಗಳನ್ನು ಹೇಳುವ ಈ ಕತೆ ಆಧುನಿಕ ಬದುಕಿನ ನಿತ್ಯದ ಬಿಕ್ಕಟ್ಟುಗಳಿಗೆ ಆಫ್ರಿಕಾದ ಸಾಂಪ್ರದಾಯಿಕ ವಿವೇಕ ಹುಡುಕಿಕೊಂಡ ಉತ್ತರವೊಂದನ್ನು ಮಂಡಿಸುತ್ತದೆ.

ಕುವೆಂಪು ಭಾಷಾಭಾರತಿ ಪ್ರಾಧಿಕಾರ ಸದ್ಯದಲ್ಲೇ ಹೊರ ತರಲಿರುವ 'ಆಫ್ರಿಕಾ ಸಾಹಿತ್ಯ ವಾಚಿಕೆ' ಸಂಕಲನದಿಂದ ಈ ಕತೆಯನ್ನು ಆಯ್ದುಕೊಳ್ಳಲಾಗಿದೆ.

---

## ನಟರಾಜ್ ಹುಳಿಯಾರ್

ಕತೆಗಾರ, ವಿಮರ್ಶಕ, ಸಂಸ್ಕೃತಿ ಚಿಂತಕ ನಟರಾಜ್ ಹುಳಿಯಾರ್ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರು. ತುಮಕೂರು ಜಿಲ್ಲೆಯ ಹುಳಿಯಾರಿನವರಾದ ಅವರು ಕತೆ, ಕವಿತೆ, ಅಂಕಣ ಬರಹಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕಿ.ರಂ. ನಾಗರಾಜ, ಪಿ. ಲಂಕೇಶ್ ಅವರ ಬರಹಗಳನ್ನು ಸಂಪಾದಿಸಿದ್ದಾರೆ.